**2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ, ಹಾಸನ,**

**ಎಸ್.ಸಿ.ನಂಃ-41/2017**

ಪಿ.ಡಬ್ಲ್ಯೂಃ- 9

ಸಿ.ಡಬ್ಲ್ಯೂಃ- 14

| | | |
|---|---|---|
| ಸಾಕ್ಷಿದಾರರ ಹೆಸರುಃ | : | ಮಹೇಂದ್ರ ಹೆಚ್ ಆರ್ |
| ತಂದೆಯ ಹೆಸರುಃ | : | ರಂಗೇಗೌಡ |
| ವಯಸ್ಸುಃ | : | 47 ವರ್ಷ |
| ವೃತ್ತಿಃ | : | ಆಟೋ ಚಾಲಕ |
| ವಾಸಃ | : | ಅರವೀಹಳ್ಳಿ ಗ್ರಾಮ, ಹಾಸನ ತಾಃ. |

**ದಿನಾಂಕಃ28-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ಸುಮಾರು 8 ವರ್ಷ 11 ತಿಂಗಳ ಹಿಂದೆ ಹಾಸನ ಗ್ರಾಮಾಂತರ ಪೊಲೀಸರು ಒಂದು ಮಹಜರ್ ಗೆ ಸಾಕ್ಷಿದಾರನಾಗಿ ಸಹಕರಿಸಲು ಠಾಣೆಗೆ ಕರೆಸಿದ್ದರು. ನಾನು ಠಾಣೆಗೆ ಹೋದ ಕಾಲದಲ್ಲಿ ಚಾಸಾ-15 ಪ್ರವೀಣ ಸಹ ಹಾಜರಿದ್ದರು. ಠಾಣೆಯಲ್ಲಿ 1ನೇ ಆರೋಪಿ ಮಲ್ಲಿಕಾರ್ಜುನ ಹಾಗೂ 2ನೇ ಆರೋಪಿ ಪರಮೇಶ ರವರು ಸಹ ಇದ್ದರು. ಪೊಲೀಸರು 1 ಹಾಗೂ 2ನೇ ಆರೋಪಿಗಳನ್ನು ಠಾಣೆಯಲ್ಲಿ ವಿಚಾರಿಸಿದಾಗ ಅವರುಗಳು ಪಾಲಾಕ್ಷ ಮತ್ತು ಕುಮಾರಸ್ವಾಮಿ ರವರಿಗೆ ಹೊಡೆಯಲು ಉಪಯೋಗಿಸಿದ ದೊಣ್ಣೆಗಳನ್ನು 1ನೇ ಆರೋಪಿ ಮಲ್ಲಿಕಾರ್ಜುನಸ್ವಾಮಿ ಮನೆಯ ಬಳಿ ಇರುವ ಬೇಲಿಯಲ್ಲಿಟ್ಟಿದ್ದು ತಮ್ಮನ್ನು ಕರೆದುಕೊಂಡು ಹೋದರೆ ಸದರಿ ದೊಣ್ಣೆಗಳನ್ನು ತಾವು ತೆಗೆದು ಹಾಜರುಪಡಿಸುವುದಾಗಿ

ತಿಳಿಸಿದರು. ನಂತರ ಜೀಪಿನಲ್ಲಿ ನಾನು, ಪ್ರವೀಣ, ಆರೋಪಿ-1 ಮಲ್ಲಿಕಾರ್ಜುನ ಹಾಗೂ 2ನೇ ಆರೋಪಿ ಪರಮೇಶ ರವರು ಹೊರಟಿದ್ದು ಆರೋಪಿಗಳು ನಮ್ಮನ್ನು ಇಬ್ಬಾಣೆ ಗ್ರಾಮದ 1ನೇ ಆರೋಪಿ ಮಲ್ಲಿಕಾರ್ಜುನಸ್ವಾಮಿ ಮನೆಯ ಬಳಿ ಕರೆದುಕೊಂಡು ಹೋಗಿರುತ್ತಾರೆ. ನಂತರ ಆರೋಪಿಗಳು ಮಲ್ಲಿಕಾರ್ಜುನಸ್ವಾಮಿ ಮನೆಯ ಬಲಭಾಗದಲ್ಲಿರುವ ಬೇಲಿಯ ಒಳಗಿನಿಂದ ನಾಲ್ಕು ದೊಣ್ಣೆಗಳನ್ನು ತೆಗೆದು ಹಾಜರುಪಡಿಸಿರುತ್ತಾರೆ. ಸದರಿ ದೊಣ್ಣೆಗಳನ್ನು ನಾನು ನೋಡಿದರೆ ಗುರುತಿಸಬಲ್ಲೆ. ಆರೋಪಿ-1 ಹಾಗೂ 2 ರವರು ಹಾಜರುಪಡಿಸಿದ ದೊಣ್ಣೆಗಳು ಮುಮಾ-9 ರಿಂದ 12 ಆಗಿರುತ್ತವೆಂದು ಸಾಕ್ಷಿದಾರರು ಗುರುತಿಸಿರುತ್ತಾರೆ. ಅಮಾನತ್ತುಪಡಿಸಿಕೊಂಡ ದೊಣ್ಣೆಗಳನ್ನು ಪೊಲೀಸರು ಬಿಳಿಯ ಬಟ್ಟೆಗಳಿಂದ ಸುತ್ತಿ ದಾರದಿಂದ ಹೊಲೆದು K ಎಂಬ ಇಂಗ್ಲೀಷ್ ಅಕ್ಷರದಿಂದ ಸೀಲು ಮಾಡಿ ಮಹಜರ್ ತಯಾರಿಸಿ ದೊಣ್ಣೆಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ಸಾಕ್ಷಿದಾರರು ಗುರುತಿಸಿದ ಅಮಾನತ್ತು ಮಹಜರನ್ನು ನಿಪಿ-8 ಎಂದು, ನಿಪಿ-8 ರಲ್ಲಿ ಸಾಕ್ಷಿದಾರರು ಗುರುತಿಸಿದ ಅವರ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ನಿಪಿ-8 ಮಹಜರನ್ನು ಪೊಲೀಸರು ಮಧ್ಯಾಹ್ನ 3.30 ರಿಂದ 4.30 ಗಂಟೆ ಸಮಯದಲ್ಲಿ ಬರೆದಿರುತ್ತಾರೆ. ಸಾಕ್ಷಿದಾರರು 1ನೇ ಆರೋಪಿ ಮಲ್ಲಿಕಾರ್ಜುನ ಹಾಗೂ 2ನೇ ಆರೋಪಿ ಪರಮೇಶ ರವರನ್ನು ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ.

**<u>ಪಾಟೀ ಸವಾಲು: ಆರೋಪಿತರ ಪರ ಶ್ರೀ ಸಿ ಎನ್ ವಿ ವಕೀಲರಿಂದ:</u>**

2. 1 ಹಾಗೂ 2ನೇ ಆರೋಪಿಗಳ ಪರಿಚಯ ನನಗೆ ಇರಲಿಲ್ಲ ನಾನು ಅವರನ್ನು ಪೊಲೀಸ್ ಠಾಣೆಯಲ್ಲಿಯೇ ನೋಡಿರುವುದು. ಕುಪ್ಪಳ್ಳಿ ಗ್ರಾಮದಲ್ಲಿ ನನ್ನ

ಸಂಬಂಧಿಕರು, ಪರಿಚಯಸ್ಥರು ಇರುವುದಿಲ್ಲ. ನಿಪಿ–8 ಮಹಜರ್ ಕಾಲದಲ್ಲಿ ಇದ್ದ ಇನ್ನೊಬ್ಬ ಸಾಕ್ಷಿದಾರರು ಎನ್ನಲಾದ ಪ್ರವೀಣ ನನ್ನ ಪರಿಚಯಸ್ಥನಲ್ಲ. 2016 ರಲ್ಲಿ ನನಗೆ ಹಾಸನ ಗ್ರಾಮಾಂತರ ಪೊಲೀಸ್ ಠಾಣೆಯ ಯಾವುದೇ ಪೊಲೀಸ್ ಸಿಬ್ಬಂದಿಗಳ ಪರಿಚಯ ಇರಲಿಲ್ಲ. ನಾನು ಹಾಸನ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಯಾವುದೇ ಪ್ರಕರಣದಲ್ಲಿ ಆರೋಪಿ ಆಗಿರಲಿಲ್ಲ ಹಾಗೂ ಅ ಠಾಣಾ ವ್ಯಾಪ್ತಿಯ ಯಾವುದೇ ಕ್ರಿಮಿನಲ್ ಪ್ರಕರಣದಲ್ಲಿ ಯಾವುದೇ ದಾಖಲಾತಿಗೆ ಸಾಕ್ಷಿದಾರನಾಗಿ ನನ್ನ ಸಹಿ ಮಾಡಿರುವುದಿಲ್ಲ. 2016 ರಲ್ಲಿ ನನ್ನ ಬಳಿ ಮೊಬೈಲ್ ಫೋನ್ ಇತ್ತು. 2016 ರಲ್ಲಿ ನನ್ನ ಬಳಿ ಹಾಸನ ಗ್ರಾಮಾಂತರ ಪೊಲೀಸ್ ಠಾಣೆಯ ಸಿಬ್ಬಂದಿಗಳ ಮೊಬೈಲ್ ಫೋನ್ ನಂಬರ್ ಇತ್ತು ನನ್ನ ಮೊಬೈಲ್ ಫೋನ್ ನಂಬರ್ ಠಾಣಾ ಸಿಬ್ಬಂದಿಗಳ ಬಳಿ ಇರಲಿಲ್ಲ. 2016 ರಲ್ಲಿ ನಾನು ಗುಡ್ಡೇನಹಳ್ಳಿ ಕೊಪ್ಪಲು ಗ್ರಾಮದಲ್ಲಿ ವಾಸವಾಗಿದ್ದೆ. 2016 ರಲ್ಲಿ ನಾನು ನನ್ನ ಸ್ವಂತ ಆಟೋರಿಕ್ಷಾವನ್ನು ಚಾಲನೆ ಮಾಡಿಕೊಂಡಿದ್ದೆ. ನಾನು 2016 ರಲ್ಲಿ ಬೆಳಿಗ್ಗೆ ಅಟೋ ಚಾಲಕನಾಗಿ ಹೋಗಿ ಸಂಜೆ ಮನೆಗೆ ಹಿಂದಿರುಗುತ್ತಿದ್ದೆ. ನಾನು 2016 ರಲ್ಲಿ ಹಾಸನದ ಹಳೇ ಬಸ್ ಸ್ಟಾಂಡಿನ ಬಳಿ ಇರುವ ಆಟೋ ನಿಲ್ದಾಣದಿಂದ ಬಾಡಿಗೆಗೆ ಹೋಗುತ್ತಿದ್ದೆ. ನಾನು ಆಟೋ ಬಾಡಿಗೆಗೆ ಹೋಗುತ್ತಿದ್ದ ಕಾಲದಲ್ಲಿ ಪೊಲೀಸರು ನನ್ನನ್ನು ಠಾಣೆಗೆ ಕರೆಸಿರುತ್ತಾರೆ. ನಾನು ಹಾಸನ ನಗರದಲ್ಲಿ ಬಾಡಿಗೆಗೆ ಹೋಗುತ್ತಿದ್ದ ಕಾಲದಲ್ಲಿ ಪೊಲೀಸರು ನನ್ನ ಆಟೋ ನಿಲ್ಲಿಸಿ ಮಹಜರ್ ಬರೆಯಲು ಪಂಚನಾಗಿ ಹಾಜರಿರುವ ಬಗ್ಗೆ ಕೋರಿ ನನ್ನನ್ನು ಠಾಣೆಗೆ ಕರೆದಿರುತ್ತಾರೆ. ಪೊಲೀಸರು ನನ್ನನ್ನು ಠಾಣೆಗೆ ಕರೆದಾಗ ಎಷ್ಟು ಸಮಯ ಆಗಿತ್ತು ಎಂದು ನನಗೆ ಈಗ ನೆನಪಿಲ್ಲ. ಪೊಲೀಸರು ಠಾಣೆಗೆ ಬರುವಂತೆ ನನ್ನನ್ನು ಕರೆದ ಕೂಡಲೇ ನಾನು ಠಾಣೆಗೆ ಹೋಗಿರುತ್ತೇನೆ. ಸುಮಾರು 20 ನಿಮಿಷದ ಕಾಲ ನಾನು ಪೊಲೀಸ್ ಠಾಣೆಯಲ್ಲಿದ್ದೆ.

ನಾನು ಠಾಣೆಯಲ್ಲಿ 1 ಹಾಗೂ 2ನೇ ಆರೋಪಿಗಳನ್ನು ಪೊಲೀಸ್ ಲಾಕ್ ಅಪ್ ನಲ್ಲಿ ನೋಡಿರುತ್ತೇನೆ. ನಾನು ಠಾಣೆಗೆ ಹೋದಾಗ ಆರೋಪಿ-1 ಹಾಗೂ 2 ರವರ ಜೊತೆ ಖುದ್ದಾಗಿ ಮಾತನಾಡಿರುವುದಿಲ್ಲ. ಆರೋಪಿ-1 ಹಾಗೂ 2 ರವರು ನನಗೆ ಖುದ್ದಾಗಿ ಯಾವುದೇ ವಿಷಯ ತಿಳಿಸಿಲ್ಲ.

3. ನಾವು ಠಾಣೆಯಿಂದ ಒಂದು ಜೀಪಿನಲ್ಲಿ ಒಟ್ಟು 7 ಜನರು ಹೊರಟಿರುತ್ತೇವೆ. ನಾನು ನಿಪಿ-8 ಮಹಜರ್ ಬರೆದ ಸ್ಥಳವನ್ನು ಈ ಹಿಂದೆ ನೋಡಿರಲಿಲ್ಲ. ಠಾಣೆಯಿಂದ ಹೊರಟ ನಂತರ ಜೀಪಿನಲ್ಲಿದ್ದ ಅವಧಿಯಲ್ಲಿ ನಾನು ಆರೋಪಿ-1 ಹಾಗೂ 2 ಮತ್ತು ಪೊಲೀಸರ ಜೊತೆ ಮಾತನಾಡಿಲ್ಲ. ನಿಪಿ-8 ಮಹಜರ್ ಬರೆದ ಸ್ಥಳದಲ್ಲಿ ಬೇರೆ ಯಾವುದೇ ಸಾರ್ವಜನಿಕರು ಹಾಜರಿರಲಿಲ್ಲ. ನಿಪಿ-8 ಮಹಜರ್ ಆಗುವವರೆಗೂ ನಾವು ಅಲ್ಲೇ ಇದ್ದೆವು. ನಿಪಿ-8 ಮಹಜರ್ ಬರೆದ ಸ್ಥಳದ ಚೆಕ್ಕುಬಂಧಿ ನನಗೆ ತಿಳಿದಿದೆ. ಸದರಿ ಸ್ಥಳದ ಪೂರ್ವಕ್ಕೆ ಆರೋಪಿ ಮಲ್ಲಿಕಾರ್ಜುನರವರ ವಾಸದ ಮನೆ, ಪಶ್ಚಿಮಕ್ಕೆ ಖಾಲಿ ಸೈಟು, ಉತ್ತರಕ್ಕೆ ಸಹ ಖಾಲಿ ನಿವೇಶನ ಹಾಗೂ ದಕ್ಷಿಣಕ್ಕೆ ರಸ್ತೆ ಬರುತ್ತದೆ.

4. ಮುಮಾ-9 ರಿಂದ 12 ದೊಣ್ಣೆಗಳನ್ನು ಆರೋಪಿ-1 ಹಾಗೂ 2 ರವರು ಅವರ ಮನೆಯ ಬಲಭಾಗದಿಂದ ತೆಗೆದು ಹಾಜರುಪಡಿಸಿರುತ್ತಾರೆ. 1ನೇ ಆರೋಪಿ ಮಲ್ಲಿಕಾರ್ಜುನರವರ ಮನೆಯ ಬಲಭಾಗದಲ್ಲಿದ್ದ ಬೇಲಿ ಸಣ್ಣ ಬೇಲಿ ಆಗಿತ್ತು ಎಂದರೆ ಸರಿ. ಸದರಿ ಬೇಲಿಯಲ್ಲಿದ್ದ ವಸ್ತುಗಳು ಕಣ್ಣಿಗೆ ಕಾಣುವಂತಿದ್ದವು ಎಂದರೆ ಸರಿ. ಸೈಟಿನಲ್ಲಿ ಒಡೆದ ಹೆಂಚಿನ ಚೂರುಗಳು, ರಾಡುಗಳು, ದೊಣ್ಣೆಗಳು ಬಿದ್ದಿದ್ದವು ಎಂದರೆ ನಾನು ಗಮನಿಸಿರುವುದಿಲ್ಲ. ನನಗೆ ಪಾಲಾಕ್ಷ ರವರ ಪರಿಚಯ ಇರುವುದಿಲ್ಲ. ಪೊಲೀಸರು ನನ್ನನ್ನು ಪೊಲೀಸ್ ಠಾಣೆಗೆ ಕರೆಸಿಲ್ಲ ಹಾಗೂ ಅಲ್ಲಿಂದ ಆರೋಪಿ-1 ಹಾಗೂ 2 ರವರು 1ನೇ

ಆರೋಪಿತನ ಮನೆಯ ಬಳಿ ನಮ್ಮನ್ನು ಕರೆದುಕೊಂಡು ಹೋಗಿಲ್ಲ ಹಾಗೂ ಮುಮಾ–9 ರಿಂದ 12 ದೊಣ್ಣೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ದೊಣ್ಣೆಗಳು ಇದ್ದ ಬಟ್ಟೆಯ ಚೀಲಕ್ಕೆ ಪೊಲೀಸರು ಅರಗಿನಿಂದ ಹಾಕಿದ K ಎಂಬ ಸೀಲಿನ ಮಾದರಿ ಸೀಲನ್ನು ನನಗೆ ನೀಡಿರುವುದಿಲ್ಲ.

**ಮರು ವಿಚಾರಣೆ: ಇಲ್ಲ**

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸರಿ ಇದೆ.

2ನೇ ಅಧಿಕ ಜಿಲ್ಲಾ ಮತ್ತು ಸೆಷನ್ಸ್
ನ್ಯಾಯಾಧೀಶರು, ಹಾಸನ.